| ನೋಂದಣಿ ಸಂಖ್ಯೆ Registration No: | | | | | | | | | | | |
|---|---|---|---|---|---|---|---|---|---|---|---|

A2 – 2024

ವಿಷಯ ಸಂಕೇತ Subject Code **22**

# ಅರ್ಥಶಾಸ್ತ್ರ / ECONOMICS

(Kannada and English Versions)

22

ಸಮಯ: 3 ಗಂಟೆ 15 ನಿಮಿಷಗಳು (ಒಟ್ಟು ಪ್ರಶ್ನೆಗಳ ಸಂಖ್ಯೆ : 47) ಗರಿಷ್ಠ ಅಂಕಗಳು: 80

Time : 3 Hours 15 Minutes] [Total No. of Questions : 47] [Max. Marks : 80

**(Kannada Version)**

**ಸೂಚನೆಗಳು:–**

1. ಪ್ರಶ್ನೆಗಳ ಸಂಖ್ಯೆಗಳನ್ನು ಮಾರ್ಜಿನ್‌ನಲ್ಲಿ ಸ್ಪಷ್ಟವಾಗಿ ಬರೆಯಿರಿ.
2. ಪ್ರತಿ ಪ್ರಶ್ನೆಗೆ ಉತ್ತರವು ನಿರಂತರವಾಗಿರಬೇಕು.
3. **ಭಾಗ - A** ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

## ಭಾಗ – A

I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ (ಪ್ರತಿಯೊಂದಕ್ಕೂ **1** ಅಂಕ ಮಾತ್ರ): **(5 × 1 = 5)**

1) TC =

a) TVC b) TFC

c) TFC + TVC d) AC + MC

2) ಪರಿಪೂರ್ಣ ಪೈಪೋಟಿ ಮಾರುಕಟ್ಟೆಯಲ್ಲಿ ಉದ್ಯಮ ಘಟಕಗಳು ಉತ್ಪಾದಿಸುವ ಮತ್ತು ಮಾರಾಟ ಮಾಡುವ ಉತ್ಪನ್ನಗಳು

a) ವೈವಿಧ್ಯಮಯವಾಗಿರುತ್ತವೆ

b) ಏಕರೂಪವಾಗಿರುತ್ತವೆ

c) ವಿಲಾಸಿ ಸರಕುಗಳಾಗಿರುತ್ತವೆ

d) ಅವಶ್ಯಕ ಸರಕುಗಳಾಗಿರುತ್ತವೆ

3) 1936 ರಲ್ಲಿ ಬ್ರಿಟೀಷ್ ಅರ್ಥಶಾಸ್ತ್ರಜ್ಞ ಜಾನ್ ಮೇನಾರ್ಡ್ ಕೇನ್ಸ್ ರವರು ಪ್ರಕಟಿಸಿದ ಅವರ ಪ್ರಸಿದ್ಧ ಕೃತಿ

a) ರಾಷ್ಟ್ರಗಳ ಸಂಪತ್ತು

b) ಉದ್ಯೋಗ, ಬಡ್ಡಿ ಮತ್ತು ಹಣದ ಸಾಮಾನ್ಯ ಸಿದ್ಧಾಂತ

c) ಬಡ್ಡಿ ಸಿದ್ಧಾಂತ

d) ಉದ್ಯೋಗ ಸಿದ್ಧಾಂತ

4) ಭಾರತದ ಹಣಕಾಸು ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುವ ಬ್ಯಾಂಕು

a) NABARD

b) RRB

c) IDBI

d) RBI

5) ಕೆಳಗಿನವುಗಳಲ್ಲಿ ಯಾವುದು 'ಕಾಗದದ ತೆರಿಗೆ'ಗೆ ಉದಾಹರಣೆಯಾಗಿದೆ?

a) ಸಂಪತ್ತಿನ ತೆರಿಗೆ

b) ಅಬಕಾರಿ ತೆರಿಗೆ

c) ಆದಾಯ ತೆರಿಗೆ

d) ಆಮದು-ರಫ್ತು ಸುಂಕ

II. ಆವರಣದಲ್ಲಿರುವ ಸರಿಯಾದ ಉತ್ತರವನ್ನು ಆರಿಸಿ, ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿ (ಪ್ರತಿಯೊಂದಕ್ಕೂ 1 ಅಂಕ)

**(5 × 1 = 5)**

(MPC, ತುಷ್ಟಿಗುಣ, ಕೂಲಿ ದರ, ಸದಾವಕಾಶ, ಅಂತಿಮ, ದಾಸ್ತಾನು)

6) ಬಯಕೆಗಳನ್ನು ತೃಪ್ತಿಪಡಿಸುವ ಸರಕಿನ ಸಾಮರ್ಥ್ಯ ......................

7) ಕೆಲವು ಚಟುವಟಿಕೆಗಳ ............. ವೆಚ್ಚವು ಎರಡನೇ ಉತ್ತಮ ಚಟುವಟಿಕೆಯನ್ನು ಬಿಟ್ಟುಕೊಟ್ಟ ಗಳಿಕೆಯಾಗಿರುತ್ತದೆ.

8) ಶ್ರಮದ ಬೇಡಿಕೆ ಮತ್ತು ಪೂರೈಕೆ ರೇಖೆಗಳು ಪರಸ್ಪರ ಛೇದಿಸಿದ ಬಿಂದುವಿನಲ್ಲಿ .......... ನಿರ್ಧಾರವಾಗುತ್ತದೆ.

9) ............. ಸರಕುಗಳು ಉತ್ಪಾದನೆಯ ಯಾವುದೇ ಮುಂದಿನ ಹಂತಗಳಲ್ಲಿ ಹಾದು ಹೋಗುವುದಿಲ್ಲ.

10) ಗುಣಕದ ಗಾತ್ರವು .................... ನ ಮೌಲ್ಯವನ್ನು ಅವಲಂಬಿಸಿದೆ.

**III.** ಹೊಂದಿಸಿ ಬರೆಯಿರಿ (ಪ್ರತಿಯೊಂದಕ್ಕೂ 1 ಅಂಕ) **(5 × 1 = 5)**

| | A | | B |
|---|---|---|---|
| 11) | ಶಿಕ್ಷಕರ ಸೇವೆ | a) | QD = QS |
| 12) | ಮಾರುಕಟ್ಟೆ ಸಮತೋಲನ | b) | ಗ್ರಾಹಕ ಬೆಲೆ ಸೂಚ್ಯಂಕ |
| 13) | C.P.I | c) | ಸರಕು ಮತ್ತು ಸೇವೆಗಳ ವ್ಯಾಪಾರ |
| 14) | ಉಳಿತಾಯ | d) | ಕೌಶಲ್ಯ |
| 15) | ಸಂದಾಯ ಬಾಕಿ | e) | Y – C |
| | | f) | ಕೆಳಮುಖ ಇಳಿಜಾರು |

**IV.** ಕೆಳಗಿನ ಪ್ರಶ್ನೆಗಳಿಗೆ **ಒಂದು** ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ 1 ಅಂಕ) **(5 × 1 = 5)**

16) ಆಯ್ಕೆಯ ಸಮಸ್ಯೆ ಏಕೆ ಉದ್ಭವಿಸುತ್ತದೆ?

17) ಸರಾಸರಿ ಆದಾಯವನ್ನು ಲೆಕ್ಕಾಚಾರ ಮಾಡುವ ಸೂತ್ರವನ್ನು ಬರೆಯಿರಿ.

18) ವೈಯಕ್ತಿಕ ವೆಚ್ಚ ಮಾಡಬಹುದಾದ ಆದಾಯವನ್ನು ಹೇಗೆ ಪಡೆಯುತ್ತೇವೆ?

19) ವಸ್ತು ವಿನಿಮಯ ಪದ್ಧತಿಯನ್ನು ಅರ್ಥೈಸಿರಿ.

20) **FRBMA** ಯನ್ನು ವಿಸ್ತರಿಸಿ.

## ಭಾಗ – B

V. ಈ ಕೆಳಗಿನ ಯಾವುದಾದರೂ **ಆರು** ಪ್ರಶ್ನೆಗಳಿಗೆ **4** ವಾಕ್ಯಗಳಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ **2** ಅಂಕಗಳು ): **(6 × 2 = 12)**

21) ಬದಲಿ ಸರಕುಗಳು ಎಂದರೇನು? ಉದಾಹರಣೆ ಕೊಡಿ.

22) ಅನುಭೋಗಿಯ ವರ್ತನೆಯನ್ನು ವಿವರಿಸುವ ಎರಡು ವಿಧಾನಗಳನ್ನು ತಿಳಿಸಿ.

23) ಬೆಲೆ ಪೂರೈಕೆ ಸ್ಥಿತಿಸ್ಥಾಪಕತ್ವದ ಅರ್ಥವನ್ನು ನೀಡಿ ಮತ್ತು ಅದರ ಸೂತ್ರವನ್ನು ಬರೆಯಿರಿ.

24) ಅಧಿಕ ಬೇಡಿಕೆ ಮತ್ತು ಅಧಿಕ ಪೂರೈಕೆಗಳ ನಡುವಿನ ವ್ಯತ್ಯಾಸ ತಿಳಿಸಿ.

25) ಸಮತೋಲನ ಬೆಲೆ ಮತ್ತು ಸಮತೋಲನ ಪ್ರಮಾಣಗಳನ್ನು ವ್ಯಾಖ್ಯಾನಿಸಿ.

26) GDP (ರಾಷ್ಟ್ರೀಯ ವರಮಾನ) ಮಾಪನದ ಮೂರು ವಿಧಾನಗಳನ್ನು ತಿಳಿಸಿ.

27) ಬಾಹ್ಯತೆಗಳೆಂದರೆ ಏನೆಂದು ಅರ್ಥೈಸುವಿರಿ? ಅದರ ಎರಡು ವಿಧಗಳನ್ನು ತಿಳಿಸಿ.

28) ಸಮಗ್ರ ಬೇಡಿಕೆಯ ಅರ್ಥ ನೀಡಿ ಹಾಗೂ ಅದರ ಎರಡು ಭಾಗಗಳನ್ನು ಹೆಸರಿಸಿ.

29) ಪುಕ್ಕಟೆ ಸವಾರರೆಂದರೆ ಯಾರು? ಅವರನ್ನು ಏಕೆ ಹಾಗೆ ಕರೆಯುತ್ತಾರೆ?

30) ವ್ಯಾಪಾರ ಬಾಕಿಯ ವಿಧಗಳನ್ನು ಹೆಸರಿಸಿ.

## ಭಾಗ – C

VI. ಈ ಕೆಳಗಿನ ಯಾವುದಾದರೂ **ಐದು** ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **12** ವಾಕ್ಯಗಳಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ **4** ಅಂಕಗಳು): **(5 × 4 = 20)**

31) ಒಂದು ಸರಳ ಆರ್ಥಿಕತೆಯಲ್ಲಿ ಕೃಷಿ ಕುಟುಂಬ, ನೇಕಾರ ಮತ್ತು ಶಿಕ್ಷಕರು ಸಂಪನ್ಮೂಲಗಳನ್ನು ಬಳಸಿ ಹೇಗೆ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಾರೆ ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿ.

32) ಸಾಮಾನ್ಯ ಸರಕುಗಳು ಮತ್ತು ಕೆಳದರ್ಜೆಯ ಸರಕುಗಳ ನಡುವಿನ ವ್ಯತ್ಯಾಸಗಳನ್ನು ಉದಾಹರಣೆಯೊಂದಿಗೆ ಬರೆಯಿರಿ.

33) ಸಮ ಉತ್ಪನ್ನ ರೇಖೆಯನ್ನು ರೇಖಾಚಿತ್ರದ ಸಹಾಯದಿಂದ ವಿವರಿಸಿ.

34) ಸಮತೋಲನದ ಮೇಲೆ ಏಕಕಾಲದ ಪಲ್ಲಟಗಳ ಪರಿಣಾಮವನ್ನು ತೋರಿಸುವ ಕೋಷ್ಟಕವನ್ನು ಬರೆಯಿರಿ.

35) ಸಮಗ್ರ ಅರ್ಥಶಾಸ್ತ್ರದ ದೃಷ್ಟಿಕೋನದಂತೆ ಆರ್ಥಿಕತೆಯಲ್ಲಿ ಸರ್ಕಾರ (ರಾಜ್ಯ) ಮತ್ತು ಕುಟುಂಬ ವಲಯಗಳ ಪಾತ್ರವನ್ನು ವಿವರಿಸಿ.

36) ಯೋಜಿತವಲ್ಲದ ತಪಶೀಲು ಪಟ್ಟಿಯ ಸಂಗ್ರಹಣೆ ಮತ್ತು ಕುಸಿತವನ್ನು ಉದಾಹರಣೆಯೊಂದಿಗೆ ವಿಷದಪಡಿಸಿ.

37) ಹಣದ ಬೇಡಿಕೆಯ ವ್ಯವಹಾರದ ಉದ್ದೇಶ ಮತ್ತು ಸಟ್ಟಾ ವ್ಯಾಪಾರದ ಉದ್ದೇಶಗಳ ಕುರಿತು ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ.

38) ಸಾರ್ವಜನಿಕ ಸಾಲವು ಹೊರೆಯಾಗುವುದೇ? ವಿವರಿಸಿ.

39) ಚಾಲ್ತಿ ಖಾತೆಯ ಭಾಗಗಳ ಪಟವನ್ನು ಬರೆಯಿರಿ.

## ಭಾಗ – D

**VII.** ಈ ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ **20** ವಾಕ್ಯಗಳಲ್ಲಿ ಉತ್ತರಿಸಿ **(ಪ್ರತಿಯೊಂದಕ್ಕೂ 6 ಅಂಕಗಳು ):**

**(3 × 6 = 18)**

40) ಇಳಿಮುಖ ಸೀಮಾಂತ ತುಷ್ಟಿಗುಣ ನಿಯಮವನ್ನು ಕೋಷ್ಟಕ ಮತ್ತು ರೇಖಾಚಿತ್ರದ ಸಹಾಯದಿಂದ ವಿವರಿಸಿ.

41) ಕೆಳಗಿನ ಷರತ್ತುಗಳಡಿಯಲ್ಲಿ ಪರಿಪೂರ್ಣ ಪೈಪೋಟಿಯಲ್ಲಿ ಉದ್ಯಮ ಘಟಕದ ಲಾಭ ಗರಿಷ್ಟಗೊಳಿಸುವಿಕೆಯನ್ನು ರೇಖಾಚಿತ್ರದೊಂದಿಗೆ ವಿವರಿಸಿ.

a) P = MC

b) MC ಯು $q_0$ ನಲ್ಲಿ ಇಳಿಕೆಯಾಗುವುದಿಲ್ಲ.

42) ಸಮಗ್ರ ಆರ್ಥಿಕ ಅನನ್ಯತೆಗಳನ್ನು ವಿವರಿಸಿ.

43) RBI (ಭಾರತೀಯ ರಿಸರ್ವ್ ಬ್ಯಾಂಕ್)ನ ಕಾರ್ಯಗಳನ್ನು ವಿವರಿಸಿ.

44) ಸ್ವೀಕೃತಿಗಳ ವರ್ಗೀಕರಣವನ್ನು ವಿವರಿಸಿ.

## ಭಾಗ – E

VIII. ಈ ಕೆಳಗಿನ ಯಾವುದಾದರೂ **ಎರಡು** ಕಾರ್ಯಭಾರ ಮತ್ತು ನಿಯೋಜನೆ ಆಧಾರಿತ ಪ್ರಶ್ನೆಗಳಿಗೆ ಉತ್ತರಿಸಿ (ಪ್ರತಿಯೊಂದಕ್ಕೂ **5** ಅಂಕಗಳು): **(2 × 5 = 10)**

45) ಒಬ್ಬ ಅನುಭೋಗಿಯು ಎರಡು ಸರಕುಗಳನ್ನು ಅನುಭೋಗಿಸಲು ಬಯಸುತ್ತಾಳೆ. ಬಾಳೆಹಣ್ಣಿನ ಬೆಲೆ ರೂ. **5** ಮತ್ತು ಮಾವಿನ ಹಣ್ಣಿನ ಬೆಲೆ ರೂ. **10** ಆಗಿದ್ದು ಅನುಭೋಗಿಯ ಆದಾಯ ರೂ. **40** ಆಗಿದೆ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

a) ಅನುಭೋಗಿಯು ತನ್ನ ಸಂಪೂರ್ಣ ಆದಾಯನ್ನು ಖರ್ಚುಮಾಡಿ ಎಷ್ಟು ಪ್ರಮಾಣದ ಬಾಳೆಹಣ್ಣನ್ನು ಅನುಭೋಗಿಸಬಹುದು?

b) ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಖರ್ಚು ಮಾಡಿ ಎಷ್ಟು ಪ್ರಮಾಣದ ಮಾವಿನ ಹಣ್ಣನ್ನು ಅನುಭೋಗಿಸಬಹುದು?

c) ಬಜೆಟ್ ರೇಖೆಯ ಇಳಿಜಾರು ಕೆಳಮುಖ ಅಥವಾ ಮೇಲ್ಮುಖವಾಗಿರುತ್ತದೆಯೇ?

d) ಬಜೆಟ್ ರೇಖೆಯ ಮೇಲಿನ ಎಲ್ಲಾ ಸಂಯೋಜನೆಗಳು ಅನುಭೋಗಿಯ ಆದಾಯಕ್ಕೆ ಸಮನಾಗಿರುತ್ತವೆಯೇ? ಅಥವಾ ಇಲ್ಲವೇ?

e) ಒಂದು ಬಾಳೆಹಣ್ಣನ್ನು ಹೆಚ್ಚುವರಿಯಾಗಿಕೊಳ್ಳಲು ಮಾವಿನ ಹಣ್ಣನ್ನು ಬಿಟ್ಟುಕೊಡಬೇಕಾಗುತ್ತದೆ. ಇದು ಸರಿಯೇ?

46) ಈ ಕೆಳಗಿನ ಕೋಷ್ಟಕದಲ್ಲಿ ಕಾಣೆಯಾದ ಉತ್ಪನ್ನಗಳನ್ನು ಕಂಡುಹಿಡಿಯಿರಿ:

| Factor L | $TP_L$ | $MP_L$ | $AP_L$ |
|---|---|---|---|
| 0 | 0 | 0 | 0 |
| 1 | 15 | – | 15 |
| 2 | 35 | – | 17.5 |
| 3 | 50 | 15 | 16.66 |
| 4 | – | 10 | – |
| 5 | – | 5 | 13 |
| 6 | 66 | 1 | 11 |

**(ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಮಾತ್ರ)**

ಒಟ್ಟು ಉತ್ಪನ್ನ, ಸೀಮಾಂತ ಉತ್ಪನ್ನ ಮತ್ತು ಸರಾಸರಿ ಉತ್ಪನ್ನಗಳ ಅರ್ಥವನ್ನು ಬರೆಯಿರಿ.

47) ಈ ಕೆಳಗಿನ ಯಾವುದಾದರೂ **5** ದೇಶಗಳ ಕರೆನ್ಸಿಗಳನ್ನು ಹೆಸರಿಸಿ:

**USA, UK,** ಜರ್ಮನಿ, ಜಪಾನ್, ಚೈನಾ, ಅರ್ಜಂಟೈನಾ, **UAE,** ರಷ್ಯಾ, ಬಾಂಗ್ಲಾದೇಶ.

(English Version)

**Instructions :**

1. *Write the question numbers legibly in the margin.*
2. *Answer for the questions should be continuous.*
3. *For PART-A questions, only the first written answers will be considered for Evaluation.*

## PART – A

I. Choose the correct answer (Each question carries 1 mark): **(5 × 1 = 5)**

1) TC =

a) TVC

b) TFC

c) TFC + TVC

d) AC + MC

2) In a perfect competition each firm produces and sells

a) Heterogeneous products

b) Homogeneous products

c) Luxury goods

d) Necessary goods

3) In 1936 British economist J.M. Keynes published his celebrated book

a) Wealth of Nations

b) General Theory of Employment, Interest and Money

c) Theory of Interest

d) Theory of Employment

4) The Bank which acts as monetary authority of India.

a) NABARD

b) RRB

c) IDBI

d) RBI

5) Which of the following is an example for 'paper taxes'?

a) Wealth Tax

b) Excise Taxes

c) Income Tax

d) Customs Duties

II. Fill in the blanks by choosing correct answer from the bracket. (Each question carries 1 mark): **(5 × 1 = 5)**

**(MPC, Utility, Wage rate, Opportunity, Final, Stock)**

6) Want satisfying capacity of a commodity is ________.

7) ________ cost of some activity is the gain foregone from the second best activity.

8) ________ is determined at the point where the demand for labour and supply of labour curves intersect.

9) ________ goods will not pass through any more stages of production.

10) Size of the multiplier depends on the value of ________.

III. Match the following (Each question carries 1 mark): (5 × 1 = 5)

| | A | | B |
|---|---|---|---|
| 11) | Service of Teacher | a) | QD = QS |
| 12) | Market equilibrium | b) | Consumer price Index |
| 13) | C.P.I | c) | Trade in goods and services |
| 14) | Savings | d) | Skill |
| 15) | Balance of payment | e) | Y – C |
| | | f) | Downward sloping |

IV. Answer the following questions in a sentence or a word. (Each question carries 1 mark) (5 × 1 = 5)

16) Why does the problem of choice arise?

17) Write the formula to calculate average revenue.

18) How do we get personal disposable income?

19) What do you mean by barter system?

20) Expand FRBMA.

## PART – B

V. Answer any six of the following questions in 4 sentences each. (Each question carries 2 marks): (6 × 2 = 12)

21) What do you mean by substitute goods? Give example.

22) Mention two different approaches which explain consumer behaviour.

23) Give the meaning of price elasticity of supply and write its formula.

24) Distinguish between excess demand and excess supply.

25) Define equilibrium price and equilibrium quantity.

26) Mention 3 methods of measuring GDP (National Income).

27) What do you mean by externalities? Mention its two types.

28) Give the meaning of Aggregate Demand and mention its two parts.

29) Who are 'Free Riders'? Why are they called so?

30) Mention the types of balance of trade (BOT).

## PART – C

VI. Answer any **five** of the following questions in **12** sentences each. (Each question carries **4** marks): **(5 × 4 = 20)**

31) Briefly explain how the family of farmer, weaver and Teacher can use their resources to fulfill their needs in a simple economy.

32) Explain the differences between normal goods and inferior goods with example.

33) Explain Isoquant with the help of a diagram.

34) Write a table to show the impact of simultaneous shifts on equilibrium.

35) Explain the role of Government (state) and family sectors in the view of macroeconomics.

36) Illustrate unplanned accumulation and decumulation of inventories with an example.

37) Write a brief note on Transactionary motive and speculative motive of demand for money.

38) Does public debt impose a burden? Explain.

39) Write the chart of components of current account.

## PART – D

VII. Answer any **three** of the following questions in **20** sentences each. (Each question carries **6** marks): **(3 × 6 = 18)**

40) Explain the law of diminishing marginal utility with the help of a table and diagram.

41) Explain the profit maximisation of a firm under perfect competition with the help of a diagram under the following conditions.

a) P = MC

b) MC must be none decreasing at $q_0$

42) Explain the macroeconomic identities.

43) Explain the functions of Reserve Bank of India (RBI).

44) Explain the classification of receipts.

## PART – E

VIII. Answer any **two** of the following project and assignment-oriented questions. (Each question carries 5 marks): **(2 × 5 = 10)**

45) A consumer wants to consume two goods. The price of banana is Rs. 5 and the price of mango is Rs. 10. The consumer income is Rs. 40. Answer the following questions:

a) How many bananas can she consume if she spends her entire income on that good?

b) How many mangoes can she consume if she spends her entire income on that good?

c) Is the slope of budget line downward or upward?

d) Are the bundles on the budget line equal to the consumer's income or not?

e) If you want to have more of bananas, you have to give up mangoes. Is it true?

46) Find the missing products of the following table:

| Factor L | $TP_L$ | $MP_L$ | $AP_L$ |
|---|---|---|---|
| 0 | 0 | 0 | 0 |
| 1 | 15 | – | 15 |
| 2 | 35 | – | 17.5 |
| 3 | 50 | 15 | 16.66 |
| 4 | – | 10 | – |
| 5 | – | 5 | 13 |
| 6 | 66 | 1 | 11 |

**(For visually-impaired students only)**

Give the meaning of TP (Total Product), MP (Marginal Product) and AP (Average Product).

22

47) Name the currencies of any five countries of the following:

USA, UK, Germany, Japan, China, Argentina, UAE, Russia and Bangladesh.